ತಮ್ಮ ಸಲಹೆ ಏನಾದರೂ ಇದ್ದರೆ ಕೊಡಿ, ಆ ಸಲಹೆಗಳನ್ನು ಎಷ್ಟರಮಟ್ಟಿಗೆ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದನ್ನು ವಿಚಾರ ಮಾಡೋಣ, ಮತ್ತೆ ಕೇಂದ್ರ ಸರ್ಕಾರಕ್ಕೆ ಈ ಯೋಜನೆಯನ್ನು ಯಾವರೀತಿ ತಯಾರು ಮಾಡಿದ್ದೇವೆ ಎಂದು ಹೇಳಿ, ಪಬ್ಲಿಕ್ ಸೆಕ್ಟಾರ್ ಬ್ಯಾಂಕುಗಳಿಗೆ ಏನು ಸಹಾಯ ಮಾಡಿದ್ದೀರಿ ಅದೇರೀತಿ ಸಹಾಯವನ್ನು ಸಹಕಾರ ಸಂಘಗಳ ಸಾಲಕ್ಕೂ ಕೊಡಬೇಕೆಂದು ಕೇಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ:-- ಇದು ರೈತರ ವಿರೋಧಿ ಸರ್ಕಾರ. ರೈತನ ಬಗ್ಗೆ ನಿಮಗೆ ಕಳಕಳಿ ಇಲ್ಲ. ಎಲ್ಲದ್ದಕ್ಕೂ ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿಯನ್ನು ಹೊರಿಸುತ್ತೀರಿ. ಇದರಲ್ಲಿ ನಿಮ್ಮ ಜವಾಬ್ದಾರಿಯೂ ಇದೆ. ತಮ್ಮ ರೈತ ವಿರೋಧಿ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಹೊರಗೆ ಹೋಗುತ್ತೇವೆ.

(ಬಿ.ಜೆ.ಪಿ.ಯ ಸದಸ್ಯರುಗಳು ಸದನದಿಂದ ನಿರ್ಗಮಿಸಿದರು)

೧.೩೧ ಪಿ.ಎಂ.

ANNOUNCEMENT

MR. SPEAKER.-- Under Rule 9 of the Rules of Procedure and Conduct of Business in the Legislative Assembly I nominate the following members on the panel of Chairmen for the current Session.

1. Smt. Chandraprabha Urs
2. Smt. Renuka Rajendran
3. Sri G. Rajugowda
4. Sri Idinabba
5. Sri S. H. Koujalgi
6. Sri Basavaraj Patil Atoor

ಗಮನ ಸೆಳೆಯುವ ಸೂಚನೆಗಳು

ಮಂಡ್ಯ ನಗರಕ್ಕೆ ನೀರು ಸರಬರಾಜು ಮಾಡುವ ಬಗ್ಗೆ

ಶ್ರೀ ಎಂ. ಎಸ್. ಆತ್ಮಾನಂದ್.-- ಮಾನ್ಯ ಅಧ್ಯಕ್ಷರೇ ಮಂಡ್ಯ ನಗರಕ್ಕೆ ನೀರು ಸರಬರಾಜು ಮಾಡುವ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

(ಶ್ರೀ ಬಿ. ಎಂ. ಇದಿನಬ್ಬ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮಂತ್ರಿ ನಗರಾಭಿವೃದ್ಧಿ ಸಚಿವರು).— ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರಕ್ಕೆ ಹಾಲಿ ನೀರು ಸರಬರಾಜು ಯೋಜನೆ ೧೯೭೧ ರಲ್ಲಿ ೧೧೫ ಲಕ್ಷ ರೂಪಾಯಿ ಅಂದಾಜನ್ನು ಸರ್ಕಾರ ಮಂಜೂರು ಮಾಡಿತು. ಯೋಜನೆಯನ್ನು ಕಾರ್ಯಗತಗೊಳಿಸಲು ಜಲಮಂಡಲಿಗೆ ೧೯೭೫ರಲ್ಲಿ ವರ್ಗಾಯಿಸಲಾಯಿತು. ಈ ಯೋಜನೆಯನ್ನು ಕಾರ್ಯಗತಗೊಳಿಸಿ ೧೯೮೫ರಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಇದರ ಮೂಲ ಸ್ಥಾವರ ಕಾವೇರಿ ನದಿಯಾಗಿದೆ.

ಹಾಲಿ ಯೋಜನೆಯನ್ನು ೨೦೦೧ನೇ ಇಸವಿಯಲ್ಲಿ ಊಹಿಸಲಾದ ೧,೧೫,೦೦೦ ಜನಸಂಖ್ಯೆಗೆ ದಿನಂಪ್ರತಿ ತಲಾ ೧೧೨ ಲೀಟರ್ (೨೫ ಗ್ಯಾಲನ್)ನೀರನ್ನು ಸರಬರಾಜು ಮಾಡಲು ಯೋಜಿಸಲಾಗಿತ್ತು. ಆದರೆ ಈಗಾಗಲೇ ಮಂಡ್ಯ ನಗರದ ಜನಸಂಖ್ಯೆಯು ಸುಮಾರು ೧,೨೫,೦೦೦ಕ್ಕಿಂತಲೂ ಹೆಚ್ಚಾಗಿರುವುದು. ಇದಲ್ಲದೆ ಪ್ರತಿ ದಿನವೂ ವಿದ್ಯುತ್ ಕೊರತೆಯಿಂದಾಗಿ ೧೮ ರಿಂದ ೨೦ ಗಂಟೆಗಳ ಕಾಲ ಮಾತ್ರ ಪಂಪುಗಳನ್ನು ಚಾಲನೆ ಮಾಡಲು ಸಾಧ್ಯವಾಗುತ್ತಿದೆ. ಹೀಗಾಗಿ ಹಾಲಿ ದಿನಂಪ್ರತಿ